ಹಿನ್ನೆಲೆಯಲ್ಲಿ ನೋಡಿದಾಗ 'ನಾನೆಂಬುದು ಕಿಂಚಿತ್ತು' ಎನ್ನುವಲ್ಲಿ ಅಣಕದ, ಕಿಚಾವಣೆಯ, ಸಮಾಜಕ್ಕೆ ಸವಾಲಿನ, ಧ್ವನಿಗಳೂ ಹೊರಡುತ್ತವೆ. 'ಓಂಕಾರದ ಶಂಖನಾದಕಿಂತ ಕಿಂಚಿದೂನ' ಎಂದ ಬೇಂದ್ರೆಗೆ ತಮ್ಮ ಭಾವಗೀತೆಯ ಬಗ್ಗೆ ಇದ್ದಿರಬಹುದಾದ ಸ್ವ-ನಂಬಿಕೆ, ಆತ್ಮವಿಶ್ವಾಸ ಇಲ್ಲೂ ಮಿಂಚಿದಂತಿದೆ.

ಬಾಲ್ಯದಿಂದ ಬದುಕಿನ ಕೊನೆಯವರೆಗೂ ಅನಾಥತೆಯ ವಿವಿಧ ಹಂತಗಳನ್ನು ಹಾದು ಬಂದು ಕನ್ನಡ ಸಾಹಿತ್ಯಲೋಕದಲ್ಲಿ ನೆಲೆ ನಿಂತ ಮೊಗಳ್ಳಿಯ ಕಥಾಪಯಣ ಸದಾ ಬರೆಯಲೆಂದೇ ಕಾತರಿಸಿ ಬದುಕಿದ ಲೇಖಕನೊಬ್ಬನ ಕಥಾಪಯಣ. ವಾಸ್ತವತೆ-ಮಾಂತ್ರಿಕತೆಗಳ ನಡುವಣ ಈ ಪಯಣ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ವಿಶೇಷ ವಿದ್ಯಮಾನ ಕೂಡ ಆಗಿದೆ.

7

**ಕೊನೆಟಿಪ್ಪಣಿ:** ವಿಕ್ರಮ ವಿಸಾಜಿ ಮಾಡಿದ ಮೊಗಳ್ಳಿಯ ಕೊನೆಯ ಸಂದರ್ಶನವನ್ನು ಪ್ರಕಟಿಸಿದ್ದ 'ಮಯೂರ' ಮಾಸಪತ್ರಿಕೆಗೆ ಕಥೆಗಾರ ಸಾವಿನ ಹಾಸಿಗೆಯ ಮೇಲೆ ಬರೆದ ಕೊನೆಯ ಎರಡು ಕಥೆಗಳೂ ತಲುಪಿದ್ದವು. ಮೊಗಳ್ಳಿಯ ಒಟ್ಟು ಕಥೆಗಳ ಅರ್ಧದಷ್ಟನ್ನಂತೂ ಪ್ರಕಟಿಸಿರುವ 'ಪ್ರಜಾವಾಣಿ', 'ಮಯೂರ', 'ಸುಧಾ' ಗಳ ಸಂಪಾದಕೀಯ ವಿಭಾಗಗಳ ಎಡಿಟಿಂಗ್ ಕೌಶಲವೂ ಮೊಗಳ್ಳಿಯ ಕಥಾಪಯಣಕ್ಕೆ ಪೂರಕ ಕೊಡುಗೆ ಕೊಟ್ಟಿರುವುದನ್ನು ಮರೆಯಬಾರದು. 'ಲಾಸ್ಟ್ ಸಪ್ಪರ್' ಕಥೆ 'ಮಯೂರ'ದ ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿದೆ. 'ಹೊಸಿಲು ದಾಟಿದವರು' ಕಥೆ ಈ ಲೇಖನದ ಜೊತೆಗೇ ಪ್ರಕಟವಾಗುತ್ತಿದೆ. ಕಥೆಗಾರನ ದೇಹದ ಜೀವ ಸೆಲೆ ಬತ್ತತೊಡಗಿದ್ದರೂ ಕಥಾ ಬರವಣಿಗೆಯ ಚೈತನ್ಯ ಮಾತ್ರ ಹಾಗೇ ಉಳಿದಿದ್ದನ್ನು ಈ ಕಥೆಗಳು ಹೇಳುತ್ತವೆ.

ಮನೆಯಲ್ಲಿ ಹೆಂಡತಿ, ಮಕ್ಕಳಿಗೆ, ಗೆಳೆಯರಿಗೆ ತಾನು ಬರೆದಿದ್ದನ್ನು ನಿರೂಪಿಸುವ, ಕೂತು ಇಡೀ ಕಥೆ ಹೇಳುವ, ಕಥೆ ಓದುವ ಅಭ್ಯಾಸವೂ ಮೊಗಳ್ಳಿಗಿತ್ತು. 'ಹೊಸಿಲು ದಾಟಿದವರು' ಕಥೆಯನ್ನು ಕೂಡ ಕಥೆಗಾರ ತನ್ನ ಜೀವಿತದ ಕೊನೆಯ ವಾರದಲ್ಲಿ ಸುಬ್ಬು ಥರದ ಗೆಳೆಯರಿಗೆ ಓದಿಹೇಳಿಯಾಗಿತ್ತು. ಈ ಕಥೆಗೂ ಮುನ್ನ ಬರೆದಿದ್ದ 'ದ ಲಾಸ್ಟ್ ಸಪ್ಪರ್' ಕಥೆಗೆ ಲಿಯನಾರ್ಡೊ ಡವಿಂಚಿಯ ಪ್ರಖ್ಯಾತ ಪೇಂಟಿಂಗಿನ ರೂಪಕಾತ್ಮಕ ಹೆಸರು ಕೂಡ ಪ್ರೇರಣೆಯಾಗಿತ್ತು. ಕೊನೆಯ ಎರಡೂ ಕಥೆಗಳಲ್ಲಿ ಸಾವಿನ ಪ್ರತಿಮೆಗಳು ಮತ್ತೆ ಮತ್ತೆ ಬಂದರೂ, ಆಸೆ, ನಿರೀಕ್ಷೆ, ಭರವಸೆಗಳ ಧ್ವನಿ ಕೂಡ ಕೊನೆಯಲ್ಲಿದೆ. 'ದಿ ಲಾಸ್ಟ್ ಸಪ್ಪರ್'ನಲ್ಲಿ ರಾತ್ರಿಯ ಕೊನೆಯೂಟದ ದಿನ ದ್ರೋಹಕ್ಕೊಳಗಾದ ಏಸುವಿನ ಚಿತ್ರವಿದ್ದರೆ, 'ಹೊಸಿಲು ದಾಟಿದವರು' ಕಥೆಯಲ್ಲಿ ಸತ್ಯಶೋಧನೆ ಮಾಡಿದ 'ಅಪರಾಧ'ಕ್ಕಾಗಿ ಬಲಿಯಾದ ಪ್ರೊ. ಕಲಬುರ್ಗಿಯವರ ಭೀಕರ ಹತ್ಯೆಯ ಚಿತ್ರ ಹಾಗೂ ಅದನ್ನು ಪ್ರತಿಭಟಿಸುವವರ ದನಿಯಿದೆ. ಎರಡೂ ಕಥೆಗಳು ಕಾಲದಲ್ಲಿ ಹಿಂದಕ್ಕೆ ಚಲಿಸಿ ಕಥೆಗಾರನ ಕಾಲಕ್ಕೆ ಮರಳಿ ಬಂದಿವೆ. ಏಸುಕ್ರಿಸ್ತ, ಬಸವಣ್ಣ, ಹರಳಯ್ಯ, ಮಂಟೇಸ್ವಾಮಿ, ಸಮಗಾರ ಭೀಮವ್ವ ಥರದ ಪೂರ್ವಿಕರೆಲ್ಲ ಕಥೆಗಾರನ ಅಪ್ರಜ್ಞೆಯ ದರ್ಶನದಲ್ಲಿ ಹಾಗೂ ಸುಳಿಯುತ್ತಿದ್ದ ಸಾವಿನ ವಾಸ್ತವವನ್ನು ಕಿಂಚಿತ್ತಾಗಿ ಕಂಡ ಕಥಾಕಾಣ್ಕೆಯಲ್ಲಿ ಕಾಣಿಸಿಕೊಂಡಿದ್ದಾರೆ. ಪದಗಳು, ವಾಕ್ಯಗಳು ಒಂಚೂರು ಹಾದಿ ತಪ್ಪುತ್ತಿದ್ದಾಗಲೂ ಕಥೆಗಾರ ಮಾತ್ರ ವಾಸ್ತವ, ಕನಸು, ಸುಷುಪ್ತಿಗಳ ನಡುವೆ ವಿಚಿತ್ರ, ವಿಶಿಷ್ಟ ಪ್ರತಿಮೆಗಳನ್ನು ಕಾಣುತ್ತಲೇ ಇದ್ದಾನೆ. ಮೂಲಮಾನವನಿಂದ ಹಿಡಿದು ವಚನಯುಗ, ಜನಪದ ಮೇಳ, ತತ್ವಪದಕಾರ ಪರಂಪರೆ ಹಾಗೂ ಈ ಕಾಲದವರೆಗಿನ ಪಾತ್ರಗಳ ದಾರ್ಶನಿಕ ಚಿತ್ರಗಳು ಕಥೆಗಾರನ ಅತೀತ ಸ್ಥಿತಿಯಲ್ಲಿ ಒಳಗಣ್ಣಿನೆದುರು ಮೆರವಣಿಗೆ ಹೊರಟಂತಿವೆ. ಈ ಪಾತ್ರಗಳ ನಡುವೆ ದೇವನೂರ ಮಹಾದೇವರ ಅಮಾಸನೂ ಹುಲಿವೇಷ ಕುಣಿಯುತ್ತಾ ಪ್ರತ್ಯಕ್ಷವಾಗಿದ್ದಾನೆ! ಮೊಗಳ್ಳಿಯ ಒಂದು ಜೀವಿತದ ಪೂರ್ಣಾವಧಿ ಕಥಾಬದುಕಿನಲ್ಲಿ ಉರಿಯುತ್ತಿದ್ದ ದೀಪ ಜೀವಾತ್ಮನು ಹೊಸಿಲು ದಾಟುವವರೆಗೂ ಆರದೆ ಉರಿಯುತ್ತಲೇ ಇದೆ...

ಮೊಗಳ್ಳಿಯ ದೈಹಿಕ-ಮಾನಸಿಕ ಏರುಪೇರುಗಳ ಫಲವಾದ ಕೆಲ ಬಗೆಯ ವರ್ತನೆಗಳ ಸಿಡುಕು, ಬೆಂಕಿ ಅಕಸ್ಮಾತ್ ನಿಮಗೆ ಸೋಕಿದ್ದರೆ ಅದನ್ನು ಮರೆತು, ಮೀರಿ, ಮೊಗಳ್ಳಿಯ ನಾಲ್ಕು ದಶಕಗಳ ಕಥಾದೀಪದ ಬೆಳಕನ್ನು ನಿಮ್ಮೊಳಗೆ ಕರೆದುಕೊಳ್ಳಿ ಎಂದಷ್ಟೇ ಹೇಳಬಲ್ಲೆ.

●